ublication : Udayavani
Date: June 14, 2014
Page No: 14
Edition: Bangalore

SARA Media Net
Simply communicate...



# ಅಪೂರ್ವ ನಿರುತ್ತರ

## ಕಾಸರವಳ್ಳಿ ಮಗನ ಚಿತ್ರದಲ್ಲಿ ಐಂದ್ರಿತಾ, ಭಾವನಾ

ಗಿರೀಶ್ ಕಾಸರವಳ್ಳಿ ಮಗ ಅಪೂರ್ವ ಕಾಸರವಳ್ಳಿ ಸದ್ಯದಲ್ಲಿಯೇ ಸ್ವತಂತ್ರ ನಿರ್ದೇಶಕರಾಗಲಿದ್ದಾರೆ ಎಂಬ ಸುದ್ದಿ ಹಳೆಯದೇ. ಈಗ ಅಪೂರ್ವ ಕೊನೆಗೂ 'ನಿರುತ್ತರ' ಎಂಬ ಚಿತ್ರದ ಮೂಲಕ ಸ್ವತಂತ್ರ ನಿರ್ದೇಶಕರಾಗುತ್ತಿದ್ದಾರೆ. ಮೂವರು ಹೆಣ್ಮಕ್ಕಳ ಸುತ್ತ ಸುತ್ತುವ ಈ ಕಥೆಯನ್ನು ವಿಕ್ರಮ್ ಹತ್ವಾರ್ ಬರೆದಿದ್ದಾರೆ. ಈ ಪೈಕಿ ಐಂದ್ರಿತಾ ರೇ ಮತ್ತು ಭಾವನಾ ಆಯ್ಕೆಯಾಗಿದ್ದಾರೆ. ಇನ್ನೊಂದು ಪ್ರಮುಖ ಪಾತ್ರವನ್ನು 'ಹಾಗೇ ಸುಮ್ಮನೆ' ಖ್ಯಾತಿಯ ಕಿರಣ್ ಶ್ರೀನಿವಾಸ್ ನಿರ್ವಹಿಸುತ್ತಿದ್ದಾರೆ. ನೀಲಾದ್ರಿ ಕುಮಾರ್ ಎಂಬುವವರು ಸಂಗೀತ ಸಂಯೋಜಿಸುತ್ತಿದ್ದರೆ, ಎಚ್.ಎಂ. ರಾಮಚಂದ್ರ ಛಾಯಾಗ್ರಹಣದ ಜವಾಬ್ದಾರಿ ಹೊತ್ತಿದ್ದಾರೆ. ಜೂನ್ 16ರ ಸೋಮವಾರದಂದು ಚಿತ್ರದ ಮುಹೂರ್ತ ಬಸವನಗುಡಿ ರಸ್ತೆಯ ದೊಡ್ಡ ಗಣಪತಿ ದೇವಸ್ಥಾನದಲ್ಲಿ ನೆರವೇರಲಿದೆ.



ಅಪೂರ್ವ ಕಾಸರವಳ್ಳಿ

# 70, Samruddhi, 1st Main, 2nd Block, Ayyappanagar, K. R. Puram, Bangalore – 560 036
Telefax : 080 25619525   Mobile : 094482 21565, 094489 02288
E-mail : saramedianet@gmail.com, amrithjogi@gmail.com
**www.saramedianet.com**